ಅಂಬೇಡ್ಕರ್ ಭವನಗಳ ನಿರ್ಮಾಣಕ್ಕಾಗಿ ಸ್ಥಳಗಳನ್ನು ಗುರುತಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ನಿಗದಿಪಡಿಸಿರುವ ಹಾಗೆ ಪ್ರತಿ ಭವನಕ್ಕೆ ಸರ್ಕಾರದ ಆದೇಶ ಸಂಖ್ಯೆ. ಸಕಇ 560 ಪಕವಿ 96 ದಿನಾಂಕ 19-8-98ರಲ್ಲಿ 5.00ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ:- 1994ರಲ್ಲಿ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಒಂದೊಂದು ಅಂಬೇಡ್ಕರ್ ಭವನವನ್ನು ಕೊಡತ್ತೇವೆಂದು ರಾಜ್ಯ ಸರ್ಕಾರ ನಿರ್ಧಾರ ಮಾಡಿತ್ತು. ಆದರೆ, ನಾಲ್ಕು ವರ್ಷಗಳು ಕಳೆದ ನಂತರವೂ 167 ಅಂಬೇಡ್ಕರ್ ಭವನಗಳನ್ನು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ನಾನು ಕೇಳುವುದೇನೆಂದರೆ, ಇಷ್ಟು ವರ್ಷಗಳಲ್ಲಿ ನೀವು ಎಷ್ಟು ಹಣವನ್ನು ಅದಕ್ಕೆಂದು ನಿಗದಿಪಡಿಸಿದ್ದೀರಿ? ಈಗಾಗಲೇ ನಾನು ಕೇಳಿದಾಗಲೂ ಸರ್ಕಾರಿ ಆದೇಶ ನಮ್ಮ ಇಲಾಖೆಗೆ ಮುಟ್ಟಿಲ್ಲವೆಂದು, ನಮಗೆ ಗೊತ್ತಿಲ್ಲವೆಂದು ಸಮಾಜ ಕಲ್ಯಾಣ ಇಲಾಖೆಯವರು ಹೇಳುತ್ತಾರೆ. ನೀವು ಮಾಡಿದೆ ಎಂದು ಹೇಳುತ್ತಿದ್ದೀರಿ. ಯಾವ ಆದೇಶದ ಪ್ರಕಾರ ಅವರ ಇಲಾಖೆಗೆ ಬರೆದಿದ್ದೀರಿ ಎಂಬುದನ್ನು ಹೇಳುತ್ತೀರಾ.?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :- 167 ಕಡೆಗಳಲ್ಲಿ ಮಂಜೂರಾತಿ ಕೊಟ್ಟಿದ್ದರೂ ಕೂಡ ಕೆಲವು ಕಡೆ ಸ್ಥಳಾಭಾವ ಇದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ವತಿಯಿಂದ ಸೂಚನೆ ಕೊಟ್ಟು, 224 ಕಡೆಗಳಲ್ಲೂ ಸ್ಥಳಗಳನ್ನು ಕಾದಿರಿಸಿ ಎಂದು ಹೇಳಿದ್ದೇವೆ. ಉಳ್ಳಾಲದಲ್ಲಿ ಸ್ಥಳವನ್ನು ಕಾದಿರಿಸಿದರೆ ತಕ್ಷಣ ಹಣವನ್ನು ಮುಜೂರಾತಿ ಮಾಡುತ್ತೇನೆ. ಈ ಸಾಲಿನಲ್ಲೇ ಕೊಡುತ್ತೇನೆ. ಕೆಲವು ಕಡೆ ಸ್ಥಳಾಭಾವದಿಂದ ಕಟ್ಟಡ ನಿರ್ಮಾಣ ಸ್ಥಗಿತವಾಗಿದೆ.

ಶ್ರೀ ಕೆ.ಜಯರಾಮಶೆಟ್ಟಿ :- ಅಲ್ಲಿ ಸ್ಥಳಾಭಾವ ಇಲ್ಲ. ಆದೇಶ, ನಿಮ್ಮ ಹಣ ಮುಟ್ಟಿಲ್ಲ. ತಾವು ಹಣವನ್ನು ಇವತ್ತು ಕೊಟ್ಟರೆ, ಸ್ಥಳ ಕೊಡಬಹುದು. ನಿಮ್ಮ ನಿಷ್ಕ್ರಿಯತೆಯನ್ನು ಹೇಳುತ್ತಿದ್ದೇನೆ, ಬೇಜಾರು ಮಾಡಿಕೊಳ್ಳಬೇಡಿ. ಸರ್ಕಾರದಿಂದ ಹಣ ಬಿಡುಗಡೆ ಮಾಡಿದ್ದೀರಾ? ಮಾಡಿದ್ದರೆ, ಎಷ್ಟು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- 167 ಕಡೆಗಳಲ್ಲೂ ಹಣವನ್ನು ಮಂಜೂರು ಮಾಡಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಗಟಾರಗಳಲ್ಲಿನ ಹೂಳು ತೆಗೆಯುವದು.

241: (1532)

ಶ್ರೀ. ಅಶೋಕ್ ಶಂಕರ ಕಾಟ್ಪೆ, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ 1996-97 ಸಾಲಿನಲ್ಲಿ ಗಟಾರಗಳಲ್ಲಿನ ಹೂಳು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಹೂಳನ್ನು ಎಲ್ಲಿಗೆ ಸಾಗಿಸಲಾಗಿದೆ?

ಇ) 1996ರಿಂದ ಈ ವರೆಗೆ ಈ ಬಗ್ಗೆ ಖರ್ಚುಮಾಡಿದ ಮೊತ್ತವೆಷ್ಟು?

ಈ) ಹೂಳು ತೆಗೆಯದೇ ಖರ್ಚು ಹಾಕಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.) :

ಅ) ಹೂಳು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದೆ.

ಆ) ಸದರೀ ಹೂಳನ್ನು ಈ ಕೆಳಗಿನ ತಗ್ಗು ಪ್ರದೇಶಗಳಿಗೆ ಸಾಗಿಸಲಾಗಿದೆ.

1) ರಾಜನಗರ ಹೆಲಿಪ್ಯಾಡ್ ಹತ್ತಿರ.

2) ಮೋಮಿನ ಪ್ಲಾಟ್ ತಗ್ಗು ಪ್ರದೇಶ.

3) ಸಿದ್ಧಾರೂಢಮಠ ಕುರುಡರ ಶಾಲೆ ಹಿಂದೆ ಶ್ರೀ ಗಾರವಾಡ ಇವರ ಮನೆ ಹತ್ತಿರದ ತಗ್ಗು ಪ್ರದೇಶ.

4) ಸಾಯಿ ನಗರ ರಸ್ತೆ ಬಾಜು ಇದ್ದ ಹಾಳು ಭಾವಿ.

5) ಭೂಮರೆಡ್ಡಿ ಕಾಲೇಜ್ ಹಿಂದಿನ ಸ್ಮಶಾನದಲ್ಲಿ.

6) ಕಾರವಾರ ರಸ್ತೆ ಕಾಂಪೋಸ್ಟ್ ಡಿಪೋ, ಹುಬ್ಬಳ್ಳಿ ಧಾರವಾಡ.

7) ಮಂಜೂರ ರಸ್ತೆ ತಗ್ಗು ಪ್ರದೇಶ.

8) ವಿವಿಧ ಸಣ್ಣಪುಟ್ಟ ತಗ್ಗು ಪ್ರದೇಶಗಳಲ್ಲಿ.

ಇ) 1997-98ರಿಂದ ಈ ವರೆಗೆ ಒಟ್ಟು ರೂ.59,17,914.000ಗಳನ್ನು ಖರ್ಚು ಮಾಡಿದೆ.

ಈ) ಇಲ್ಲ.

ಶ್ರೀ ಅಶೋಕ ಎಸ್.ಕಾಟ್ಟೆ:- ನಾವು ಕೇಳಿದ ಪ್ರಶ್ನೆಗೆ ದಿಗ್ಭ್ರಮೆ ಹುಟ್ಟಿಸುವ ಉತ್ತರ ಕೊಟಿದ್ದಾರೆ. ಇದರಲ್ಲಿ 90ರಷ್ಟು ಹಣದ ಅವ್ಯವಹಾರವಾಗಿದೆ. ಅದಕ್ಕೆಂದು ಎಷ್ಟು ಜನರನ್ನು ನೇಮಿಸಿದ್ದೀರಿ? ಯಾವ ರೀತಿ ಟೆಂಡರ್ ಕೊಟ್ಟಿದ್ದಾರೆಂಬುದರ ಬಗ್ಗೆ ಹೇಳಿ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಗಟಾರದ ಹೂಳು ತೆಗೆಯಲು50ಲಕ್ಷ ಅಲ್ಲ 59ಲಕ್ಷ ರೂಪಾಯಿ ಖರ್ಚಾಗಿದೆ. ಅವರು ಕೇಳಿದ್ದು 1996-97ನೇ ಸಾಲಿಗೆ ಸಂಬಂಧಿಸಿದಂತೆ. ಆ ಸಾಲಿನಲ್ಲಿ ನಾವು ಕೆಲಸ ಮಾಡಿಲ್ಲ.1997-98ರಲ್ಲಿ ಎಂಟು ಏರಿಯಾ, 8 ಲೊಕ್ಯಾಲಿಟಿ ಮತ್ತು ಒಂದು ಮೇಜರ್ ನಾಲಾ ಕೆಲಸ ಸೇರಿ ಎಷ್ಟಿಮೇಟ್ ಕಾಸ್ಟ್ ಒಂದು ಕೋಟಿಗೂ ಮೀರಿತ್ತು. ಅಲ್ಲಿನ ಕಮಿಷನರ್ ಎಲ್ಲಾ ಪೀಸ್ ವರ್ಕ್ ಮಾಡಿ, ಡಿಪಾರ್ಟ್‌ಮೆಂಟ್ ವರ್ಕ್ ಮಾಡಿ 59 ಲಕ್ಷ ರೂಪಾಯಿಗಳಲ್ಲಿ ಕೆಲಸ ಮಾಡಿದ್ದಾರೆ. ಇಷ್ಟು ಮೇಜರ್ ವರ್ಕ್ಸ್‌ನ್ನು ಸ್ವಲ್ಪ ಮೊತ್ತದಲ್ಲಿ ಮಾಡಲಾಗಿದೆ ಎಂದು ಲೋಕಲ್ ಪೇಪರ್‌ನಲ್ಲಿ ವರದಿ ಬಂದಿದೆ. ಎಲ್ಲಿ ತಪ್ಪಾಗಿದೆ ಎಂಬ ಬಗ್ಗೆ ಅವರಲ್ಲಿ ಡಾಕ್ಯುಮೆಂಟರಿ ಪ್ರೂಫ್ ಇದ್ದರೆ, ಅದನ್ನು ಕೊಟ್ಟರೆ ಎನ್‌ಕ್ವಯರಿ ಮಾಡಿ ಸರಿಪಡಿಸುತ್ತೇನೆ.

ಶ್ರೀ ಅಶೋಕ್ ಎಸ್.ಕಾಟ್ಟೆ:- ಸಣ್ಣ ಗಟಾರದ ಹೂಳು ತೆಗೆದು ರಸ್ತೆ ಮೇಲೆ ಹಾಕಿರುತ್ತಾರೆ. ಮಳೆ ಬಂದಾಗ ಅದು ಮತ್ತೆ ಗಟಾರಕ್ಕೇ ಸೇರುತ್ತದೆ. ಹೂಳು ತೆಗೆದಿದ್ದು ಏನೂ ಪ್ರಯೋಜನವಾಗಲಿಲ್ಲ ವಾದ್ದರಿಂದ ಅದನ್ನು ಬೇರೆಡೆಗೆ ಸಾಗಿಸಬೇಕು. 59 ಲಕ್ಷ 70ಸಾವಿರ ರೂ. ಏನು ಖರ್ಚುಮಾಡಿದ್ದೀರಿ. ಈ ಹಣ ಸಂಪೂರ್ಣ ವೇಸ್ಟ್ ಆಗಿದೆ

ಶ್ರೀ ಮಿರಾಜುದ್ದೀನ್ ಎನ್.ಪಟೇಲ್:- ಆ ರೀತಿ ಆಗಿದ್ದರೆ ಎನ್‌ಕ್ವಯರಿ ಮಾಡಿಸಿ, ರಿಪೋರ್ಟ್ ತರಿಸಿ, ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ನನ್ನದೊಂದು ಉಪ ಪ್ರಶ್ನೆ. ಈ ಹೂಳು ತೆಗೆದು ಇಂಥ ಏರಿಯಾದಲ್ಲಿ ಆ ಹೂಳು ಹಾಕುತ್ತೇವೆಂದು ಮೆನ್‌ಷನ್ ಮಾಡಿದ್ದೀರಿ.

ಉಪಾಧ್ಯಕ್ಷರು:- ನಾನು ನಿಮ್ಮನ್ನು ಕರೆದಿಲ್ಲ. ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:- ಕಾರವಾರ ರಸ್ತೆಯಲ್ಲಿ ಹೂಳು ಹಾಕುತ್ತಿದ್ದಾರೆ. ಅದು ನಾರುತ್ತಿದೆ ಅದನ್ನು ರಸ್ತೆಬದಿಗೆ ಹಾಕಬೇಕು.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್:-ಆದರ ಬಗ್ಗೆ ಗಮನಿಸುತ್ತೇನೆ.

ಬಾಗಲಕೋಟೆ ಜಿಲ್ಲೆಯ ಇಳಕಲ್-ಹುನಗುಂದ ಅವಳಿ ನಗರಗಳಿಗೆ ಕುಡಿಯುವ ನೀರು ಸರಬರಾಜು.

242 (1641)

ಶ್ರೀ.ಪೂಜಾರಿ ಪ್ರಹ್ಲಾದ್ ಹುನುಮಂತಪ್ಪ (ಬಾಗಲಕೋಟೆ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬಾಗಲಕೋಟೆ ಜಿಲ್ಲೆಯ ಇಳ್‌ಕಲ್ ಹುನಗುಂದ ಅವಳಿ ನಗರಗಳಿಗೆ ಧನ್ನೂರ ಬಳಿಯ ಕೃಷ್ಣ ನದಿಯಿಂದ ನೀರು ಪೂರೈಸುವ ಯೋಜನೆ ಎಂದಿನಿಂದ ಪ್ರಾರಂಭವಾಯಿತು?
2. ಈ ಯೋಜನೆಯ ಅಂದಾಜು ವೆಚ್ಚವೆಷ್ಟು? ಇಲ್ಲಿಯವರೆಗೆ ಮಾಡಲಾದ ವೆಚ್ಚವೆಷ್ಟು? ಶೇಕಡಾವಾರು ಮುಗಿದಿರುವ ಕೆಲಸವಷ್ಟು?
3. ಈ ಯೋಜನೆಯನ್ನು ಪೂರ್ಣಗೊಳಿಸುಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು.) :

1. ಈ ಯೋಜನೆಗೆ ಸರ್ಕಾರ ದಿನಾಂಕ 30.3.90ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನೆಯ ಮುಖ್ಯ ಕಾಮಗಾರಿಯಾದ ಕೊಳವೆ ಮಾರ್ಗವನ್ನು ಹಾಕುವ ಕೆಲಸ 1992ರಿಂದ ಪ್ರಾರಂಭಿಸಲಾಯಿತು.
2. ಮಂಜೂರಾದ ಯೋಜನೆಯ ಅಂದಾಜು ವೆಚ್ಚವು ರೂ.355.00 ಲಕ್ಷಗಳು. ಇಲ್ಲಿಯವರೆಗೆ ರೂ. 516.83 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಶೇಕಡಾವಾರು ಸುಮಾರು 75ರಷ್ಟು ಕೆಲಸಗಳು ಮುಗಿದಿವೆ.
3. ಹುನುಗುಂದ ಪಟ್ಟಣಕ್ಕೆ ಸಧ್ಯದಲ್ಲೇ ನೀರು ಸರಬಹಾಜು ಮಾಡಲಾಗುವುದು. ಇಳ್‌ಕಲ್ ಪಟ್ಟಣದ ಯೋಜನೆಯನ್ನು ಆಗಸ್ಟ್ 99ರೊಳಗೆ ಚಾಲ್ತಿಗೊಳಿಸಲಾಗುವುದು.

ಶ್ರೀ ಪೂಜಾರಿ ಪ್ರಹ್ಲಾದ ಹನುಮಂತಪ್ಪ:- ಇಳ್‌ಕಲ್ ಮತ್ತು ಹುನಗುಂದ ಅವಳಿ ನಗರಗಳು ಬಾಗಲಕೋಟೆಯಲ್ಲೇ ದೊಡ್ಡ ನಗರಗಳು. 1992ರಿಂದ ನೀರು ಒದಗಿಸುವ ಯೋಜನೆ ಪ್ರಾರಂಭಿಸಿದಾಗ, ಸಚಿವರು ಇವತ್ತಿನವರೆಗೆ 75 ಪರ್ಸೆಂಟ್ ಕೆಲಸವಾಗಿದೆ ಎನ್ನುತ್ತಿದ್ದಾರೆ. 516 ಲಕ್ಷ ರೂಪಾಯಿಗಳ ಯೋಜನೆ ಮುಂದುವರೆದಿದ್ದು, 355 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ವರದಿ ಕೊಡುತ್ತಿದ್ದಾರೆ. ಅಲ್ಲಿ 30 ಪರ್ಸೆಂಟ್ ಕೆಲಸ ಇಲ್ಲಿಯವರೆಗೆ ಆಗಿಲ್ಲ. ಆ ಎರಡು ನಗರಗಳಲ್ಲಿ ಪ್ರತಿನಿತ್ಯ ನೀರಿಗಾಗಿ ಹಾಹಾಕಾರ ನಡೆಯುತ್ತಿದೆ. ಇಳ್‌ಕಲ್ ನಗರಕ್ಕೆ 99ನೇ ಇಸವಿಯಲ್ಲಿ ನೀರಿನ ಯೋಜನೆ ಜಾರಿಗೊಳಿಸಲಾಗುವುದೆಂದು ಸಚಿವರು ಉತ್ತರಿಸಿದ್ದಾರೆ. ಇದನ್ನು ನಾನು ನಂಬಲಿಕ್ಕೆ ಆಗುತ್ತಿಲ್ಲ. ಸರಿಯಾದ ವಿವರಣೆ ನೀಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್:- ಆಗಿರುವ ಕೆಲಸದ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಸರಿಯಾಗಿ ಕೆಲಸ ಆಗಿಲ್ಲವೆನ್ನುವ ಮಾಹಿತಿ ಅವರ ಹತ್ತಿರ ಇದ್ದು, ಕೊಟ್ಟರೆ ವಿಚಾರಣೆ ಮಾಡಬಹುದು. 75 ಪರ್ಸೆಂಟ್ ಕೆಲಸ ಆಗಿದ್ದು, ಸುಮಾರು 516ಲಕ್ಷ ರೂಪಾಯಿ ಖರ್ಚಾಗಿದೆ. ನಾನು ಸ್ವತಃ ಕೆಲಸವನ್ನು ವೀಕ್ಷಿಸಿದ್ದೇನೆ. ಬಾಗಲಕೋಟೆ ಮತ್ತು ಆ ನಗರಗಳಲ್ಲಿ ನೋಡಿ ಬಂದಿದ್ದು, ಈ ಯೋಜನೆಯನ್ನು ಆಗಸ್ಟ್‌ನಲ್ಲಿ